9) ನಿಯಮ 69ರ ಮೇರೆಗೆ:

ವಿಷಯ: ತೆಂಗಿನ ಮರದಿಂದ ನೀರಾ ಇಳಿಸುವ ವಿಚಾರದಲ್ಲಿ ಉಂಟಾಗಿರುವ ಪರಿಸ್ಥಿತಿ.

+ ಶ್ರೀ ಕೆ.ಬಿ.ಮಲ್ಲಿಕಾರ್ಜುನ್(ಬೀರೂರ್): ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇಲೆಗೆ ವಿರೋಧ ಪಕ್ಷದ ನಾಯಕರು, ನಮ್ಮ ನಾಯಕರು ಮತ್ತು ಅನೇಕ ಜನ ಸ್ನೇಹಿತರು ತಂದಿರತಕ್ಕ, ತೆಂಗಿನ ಮರದಿಂದ ಈ ನೀರಾವನ್ನು ಇಳಿಸುವ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅನುಮತಿಯನ್ನು ಕೊಟ್ಟದ್ದಕ್ಕಾಗಿ ಪ್ರಪ್ರಥಮವಾಗಿ ನಾನು ತಮಗೆ ವಂದಿಸುತ್ತಾ, ನಮ್ಮ ನಾಡಿನಲ್ಲಿ ಒಂದು ನಾಣ್ನುಡಿ ಇದೆ. ''ತೆಂಗಿನ ಗಿಡವನ್ನು ಮೂರು ವರ್ಷ ಸಾಕಿದರೆ ನೂರು ವರ್ಷ ಅದು ನಮ್ಮನ್ನು ಸಾಕುತ್ತದೆ'' ಎನ್ನತಕ್ಕದ್ದು ನಮ್ಮಲ್ಲಿ ನಾಣ್ನುಡಿ ಇದೆ. ಅದಕ್ಕೆ ಪೂರಕವಾಗಿ ಬಹಳಷ್ಟು ಕಾಲದಿಂದ ತೆಂಗಿನ ಮರವನ್ನು ಮೂರು ವರ್ಷಗಳ ಕಾಲ ಬೆಳೆಸಿ ಅದಾದ ಮೇಲೆ ಅದು ಫಲ ಕೊಡತಕ್ಕಂಥದ್ದು ಆದ ಮೇಲೆ ನೂರು ವರ್ಷ ತೆಂಗಿನಕಾಯಿಯನ್ನು ತೆಗೆದುಕೊಂಡು ನಮ್ಮ ಹಿರಿಯರು ಜೀವನ ಮಾಡುತ್ತಿರತಕ್ಕದ್ದು ನಮ್ಮೆಲ್ಲರಿಗೂ ತಿಳಿದಿರತಕ್ಕ ಸಂಗತಿ. ಆದರೆ ದುರಾದೃಷ್ಟವಶಾತ್ ಕಳೆದ ಹತ್ತು ವರ್ಷಗಳಿಂದ ತೆಂಗಿನ ಮರಕ್ಕೆ ಬಹಳಷ್ಟು ದೊಡ್ಡ ಆಘಾತವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಕಳೆದ ಹತ್ತು ವರ್ಷಗಳ ಹಿಂದೆ ಈ ತೆಂಗಿನ ಮರಕ್ಕೆ ಪ್ರಥಮವಾಗಿ ಕಪ್ಪು ತಲೆ ಹುಳದ ಬಾಧೆಯನ್ನು ನಾವು ಕಾಣುತ್ತಿದ್ದೇವೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಹಾರ್ಟಿಕಲ್ಚರ್ ಮತ್ತು ಅಬ್ಕಾರಿ ಮಂತ್ರಿಗಳು ಈ ಚರ್ಚೆಯ ಸಂದರ್ಭದಲ್ಲಿ ಇದ್ದರೆ ಒಳ್ಳೆಯದು.

ಅಧ್ಯಕ್ಷರು: ಮಾನ್ಯ ಕೃಷಿ ಮಂತ್ರಿಗಳು ಇದ್ದಾರಲ್ಲಾ, ಇದಕ್ಕೆ ಉತ್ತರವನ್ನು ಕೊಡುವವರು ಕೃಷಿ ಮಂತ್ರಿಗಳು. ಅದೇ ಕೆಲಸವಾಗಿ ನಾನು ಕೃಷಿ ಮಂತ್ರಿಗಳಿಗೆ ಹೇಳಿ ನೀವು ಇಲ್ಲೇ ಕುಳಿತಿರಬೇಕೆಂದು ನಾನೇ ಹೇಳಿದ್ದೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಇದು ಪ್ರಮುಖವಾದ ವಿಚಾರವಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಒಳ್ಳೆಯದು.

ಶ್ರೀ ಡಿ.ವಿ.ಸದಾನಂದಗೌಡ: ಇದರ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ. ನೀರಾಗೆ ಒಂದು ಪ್ರಾಮುಖ್ಯತೆ ಸಿಗಬೇಕೆಂಬುದೇ ನಮ್ಮೆಲ್ಲರ ಕಾಳಜಿ.

ಶ್ರೀ ಬಿ.ಸೋಮಶೇಖರ್: ನಾಳೆ ಫ್ರೆಷ್ ಆಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ತೋಟಗಾರಿಕಾ ಮಂತ್ರಿಗಳು ಶುರು ಮಾಡುತ್ತಾರೆ. ನೀವು ಈಗ ಸದನವನ್ನು ಅಡ್ಜರ್ನ್ ಮಾಡಿಬಿಡಿ.

ಶ್ರೀ ಡಿ.ಪಿ.ಸದಾನಂದಗೌಡ: ನೀರಾ ಬಗ್ಗೆ ಚರ್ಚೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ಹಾಗಾದರೆ ಸರ್ಕಾರವನ್ನು ನಾನು ಕೇಳಬೇಕು. ಆರು ಗಂಟೆಯವರೆಗೂ ಸಭೆಯನ್ನು ನಡೆಸಬೇಕೆಂದು ಇದೆ. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10-30 ಗಂಟೆಗೆ ಸೇರುತ್ತದೆ.

(ಸದನವು 5-28 ಗಂಟೆಗೆ ಮುಂದೂಡಲ್ಪಟ್ಟು ಮತ್ತು ದಿನಾಂಕ: 02-08-2001ರಂದು ಗುರುವಾರ ಬೆಳಿಗ್ಗೆ 10-30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಪ್ಪೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)